**ತಿರುಗಾಟದ ಪ್ರದರ್ಶನಗಳನ್ನು**
**ಏರ್ಪಡಿಸಬಯಸುವ**
**ವ್ಯವಸ್ಥಾಪಕರಿಗೆ ಸೂಚನೆಗಳು**

- ☐ ಕನಿಷ್ಠ ೩೦ ಅಡಿ ಅಗಲ, ೨೦ ಅಡಿ ಆಳದ ರಂಗವೇದಿಕೆ ಇರುವ, ವಿದ್ಯುತ್ ಮತ್ತು ರಸ್ತೆಯ ಸೌಲಭ್ಯವಿರುವ ಯಾವುದೇ ಊರಿನಲ್ಲಾದರೂ ನಮ್ಮ ನಾಟಕಗಳನ್ನು ಆಡಬಹುದು.
- ☐ ಆಯಾ ಊರಿನ ರಂಗಮಂದಿರ, ಪ್ರಚಾರ, ಪ್ರದರ್ಶನ ದಿನಗಳಲ್ಲಿನ ಊಟ, ವಸತಿ, ವಿದ್ಯುಚ್ಛಕ್ತಿ, ಲೈಸೆನ್ಸ್ – ಇವಿಷ್ಟು ಆಯಾ ವ್ಯವಸ್ಥಾಪಕ ಸಂಸ್ಥೆಯ ಜವಾಬ್ದಾರಿ.
- ☐ ನಮ್ಮ ಪ್ರಯಾಣ, ಪ್ರದರ್ಶನಕ್ಕೆ ಬೇಕಾದ ಹೆಚ್ಚಿನ ಎಲ್ಲಾ ಸಲಕರಣೆಗಳು, ದೀಪದ ವ್ಯವಸ್ಥೆ, ಧ್ವನಿವ್ಯವಸ್ಥೆ ಮತ್ತು ನಾಟಕಗಳಿಗೆ ಸಂಬಂಧಿಸಿದ ಸಾಮಗ್ರಿಗಳು – ಇವುಗಳ ಹೊಣೆ ನಮ್ಮದು.
- ☐ ತಿರುಗಾಟವು ಯಾವುದೇ ಸ್ಥಳದಲ್ಲೂ ಕೇವಲ ಒಂದು ಪ್ರದರ್ಶನ ಕೊಡುವುದಿಲ್ಲ. **ಯಾವುದೇ ಊರಿನಲ್ಲಿ ಒಂದೇ ಸ್ಥಳದಲ್ಲಿ ಈ ತಿರುಗಾಟದ ಎರಡೂ ನಾಟಕಗಳನ್ನು ಏರ್ಪಡಿಸುವುದು ಅಗತ್ಯ.** ಅಗತ್ಯ ವೆನಿಸಿದರೆ ಒಂದೇ ಊರಿನ ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ಕೂಡಿ ಎರಡು ಪ್ರದರ್ಶನಗಳನ್ನು ಮಾಡಿಸಬಹುದು.
- ☐ ಒಂದು ದಿನ ಒಂದು ಪ್ರದರ್ಶನ ಮಾತ್ರ ಸಾಧ್ಯವಿದ್ದು ಅದು ಸಂಜೆ ೭ರಿಂದ ೭.೩೦ರ ನಡುವೆ ಆರಂಭವಾಗುವುದು ಅಗತ್ಯ. ತಡರಾತ್ರಿಯ ಪ್ರದರ್ಶನಗಳನ್ನು ನಾವು ಮಾಡುವುದಿಲ್ಲ.
- ☐ ಪ್ರದರ್ಶನಗಳ ನಮ್ಮ ಎಲ್ಲ ಖರ್ಚುಗಳಿಗಾಗಿ ವ್ಯವಸ್ಥಾಪಕ ಸಂಸ್ಥೆಯು ನಮಗೆ ಕೊಡಬೇಕಾದ ಹಣ – **ಎರಡು ಪ್ರದರ್ಶನಗಳಿಗೆ ರೂ. ೨೮,೦೦೦.**
- ☐ ಈ ಮೊಬಲಗು ಕರ್ನಾಟಕದೊಳಗೆ ಸಾಂಸ್ಕೃತಿಕ ಸ್ವಯಂಸೇವಾ ಸಂಸ್ಥೆಗಳು ಏರ್ಪಡಿಸುವ ಪ್ರದರ್ಶನಗಳಿಗೆ ಮಾತ್ರ ಅನ್ವಯವಾಗುತ್ತದೆ. ಸರ್ಕಾರಿ, ಅರೆಸರ್ಕಾರಿ ಮತ್ತು ಉದ್ಯಮ ಸಂಸ್ಥೆಗಳು ಏರ್ಪಡಿಸುವ ಯಾವುದೇ ಪ್ರದರ್ಶನಗಳಿಗೆ ಈ ದರ ಅನ್ವಯಿಸುವುದಿಲ್ಲ.
- ☐ ತಿರುಗಾಟವು ಸಾಧಾರಣವಾಗಿ ಕರ್ನಾಟಕದ ಹೊರಗೆ ಪ್ರದರ್ಶನ ಕೊಡುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೊಡಲಾಗುವ ಹೊರರಾಜ್ಯದ ಪ್ರದರ್ಶನಗಳಿಗೆ ಖರ್ಚು ವೆಚ್ಚದ ವಿವರಗಳನ್ನು ನಮಗೆ ಬರೆದು ಪಡೆಯ ಬಹುದು.
- ☐ ತಿರುಗಾಟ ಪ್ರದರ್ಶನಗಳು ಸರಣಿಯಲ್ಲಿ ಯೋಜಿತ ವಾಗುತ್ತವೆ. ಆ ಸರಣಿಯಲ್ಲಿ ನಿಮ್ಮ ಊರಿನ ಸಮೀಪ ತಿರುಗಾಟ ಬಂದಾಗಲೇ ನಿಮ್ಮ ಊರಿನಲ್ಲಿ ಪ್ರದರ್ಶನ ಸಾಧ್ಯ. **ವಾರಕ್ಕೆ ಮತ್ತು ತಾರೀಖಿಗೆ ಸಂಬಂಧಿಸಿದ ನಿಮ್ಮ ಅನುಕೂಲತೆ ಏನಾದರೂ ಇದ್ದರೆ ಅದಕ್ಕೆ ಹೊಂದಿಸಲು ಪ್ರಯತ್ನಿಸಬಹುದೇ ವಿನಃ ಅಂತಿಮ ವಾಗಿ ತಿರುಗಾಟವು ಸೂಚಿಸುವ ವಾರ ಮತ್ತು ತಾರೀಖುಗಳಿಗೇ ನೀವು ಒಪ್ಪಿ ಕೊಳ್ಳಬೇಕಾಗುತ್ತದೆ** ಎಂಬುದನ್ನು ದಯವಿಟ್ಟು ಗಮನಿಸ ಬೇಕು.
- ☐ ದಯವಿಟ್ಟು ಜತೆಗಿರುವ ಆಹ್ವಾನಪತ್ರ ತುಂಬಿಸಿ ಕಳಿಸಿ. ಅಥವಾ ಬರೆಯಿರಿ. ಪ್ರದರ್ಶನಗಳನ್ನು ಸರಣಿಯಲ್ಲಿ ಯೋಜಿಸಬೇಕಾಗಿರುವುದರಿಂದ ನಿಮ್ಮ ಆಹ್ವಾನ ಪತ್ರವು ನಮಗೆ **೨೦೧೯ಆಗಸ್ಟ್ ಕೊನೆಯೊಳಗೆ** ತಲುಪಬೇಕು. ಆಮೇಲೆ ನಮ್ಮ ವ್ಯವಸ್ಥಾಪಕರು ನಿಮ್ಮನ್ನು ದೂರವಾಣಿ ಮೂಲಕ ಸಂಪರ್ಕಿಸಿ ದಿನಾಂಕ ಮತ್ತಿತರ ವಿವರಗಳನ್ನು ನಿಶ್ಚಿತಗೊಳಿಸುತ್ತಾರೆ.
- ☐ ತಿರುಗಾಟದ ದಿನಾಂಕ ನಿಶ್ಚಿತವಾದೊಡನೆ ನಿಮಗೆ ವಿವರಗಳ ಸಮೇತ ಕಾಗದ ಬರೆಯಲಾಗುತ್ತದೆ. ಆ ಪತ್ರಕ್ಕೆ ವ್ಯವಸ್ಥಾಪಕ ಸಂಸ್ಥೆಯು ಒಪ್ಪಿ ಸಮ್ಮತಿಯನ್ನು ನಿಗದಿತ ವೇಳೆಯೊಳಗೆ ಕಳುಹಿಸಬೇಕು. ಮತ್ತು **ರೂ. ೫,೦೦೦ ಮುಂಗಡವನ್ನು ಕೊಟ್ಟು ಪ್ರದರ್ಶನವನ್ನು ನಿಶ್ಚಯಿಸ ಬೇಕು.** ಮುಂಗಡ ಹಣ ಪಾವತಿ ಮಾಡದೆ ಇದ್ದರೆ, ಪ್ರದರ್ಶನವನ್ನು ರದ್ದುಗೊಳಿಸಲಾಗುತ್ತದೆ.

# ಪ್ರಕಟಣೆ


**ನೀನಾಸಮ್ ತಿರುಗಾಟ ೨೦೧೭**
ಹೆಗ್ಗೋಡು ಸಾಗರ ಕರ್ನಾಟಕ
೫೭೭ ೪೧೭
ದೂರವಾಣಿ: ೦೮೧೮೩ - ೨೬೫೬೪೬
Website: www.ninasam.org
email: tirugata@ninasam.org